ಬಾಗಲಕೋಟೆ ತಾಲ್ಲೂಕಿನ ಬಹಳಷ್ಟು ಗ್ರಾಮಗಳಲ್ಲಿ ಸ್ಮಶಾನ ಭೂಮಿ ಇಲ್ಲದೇ ಇರುವುದು.

897(1303) ಶ್ರೀ ಪೂಜಾರಿ ಪ್ರಹ್ಲಾದ್ ಹನುಮಂತಪ್ಪ (ಬಾಗಲಕೋಟೆ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಾಗಲಕೋಟೆ ತಾಲ್ಲೂಕಿನ ಬಹಳಷ್ಟು ಗ್ರಾಮಗಳಲ್ಲಿ ಸ್ಮಶಾನ ಭೂಮಿ ಇಲ್ಲದೆ ಜನರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸ್ಮಶಾನಕ್ಕೆ ಭೂಮಿ ಇಲ್ಲದೆ ಬಡವರು ಹೆಣಗಳನ್ನು ನದಿಯ ದಡದಲ್ಲಿ ಹೂಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸ್ಮಶಾನಕ್ಕೆ ಭೂಮಿ ನೀಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು)

ಅ) ನೀರಲಕೇರಿ, ನಿಮಿಕೇರಿ, ಗದ್ದನಕೇರಿ, ಬೇವಿನಮಟ್ಟಿ, ಹೊನ್ನಕಟ್ಟಿ ಗ್ರಾಮಸ್ಥರಿಗೆ ತೊಂದರೆಯಾಗಿದ್ದು ಗಮನಕ್ಕೆ ಬಂದಿದೆ.

ಆ) ಬಂದಿದೆ. ನದಿಯ ದಡದಲ್ಲಿ ಹೂಳುವ ಕ್ರಮ ಅನಾದಿಕಾಲದಿಂದಲ್ಲೂ ರೂಢಿಯಲ್ಲಿದೆ.

ಇ) ಸರ್ಕಾರದ ಕಾರ್ಯನೀತಿಯಂತೆ ಸರ್ಕಾರಿ ಜಮೀನು ಲಭ್ಯವಿದ್ದ ಕಡೆ ಸ್ಮಶಾನಕ್ಕಾಗಿ ಕಾಯ್ದಿರಿಸಲಾಗುತ್ತಿದೆ. ಲಭ್ಯವಿಲ್ಲದ ಕಡೆ ಜಮೀನನ್ನು ಆಶ್ರಯ ಯೋಜನೆಯಂತೆ ಖರೀದಿಸಲಾಗುತ್ತಿದೆ.

ಬಾಗಲಕೋಟೆ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ಮನೆಕಳೆದುಕೊಂಡವರಿಗೆ ಪರಿಹಾರ.

898(1304) ಶ್ರೀ ಪೂಜಾರಿ ಪ್ರಹ್ಲಾದ್ ಹನುಮಂತಪ್ಪ (ಬಾಗಲಕೋಟೆ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ವರ್ಷದ ಮಳೆಗಾಲದಲ್ಲಿ ಅತೀವೃಷ್ಟಿಯಿಂದ ಬಾಗಲಕೋಟೆ ತಾಲ್ಲೂಕಿನ 4-5 ಸಾವಿರ ಬಡಜನರ ಮನೆಗಳು ಬಿದ್ದು ಅವರೆಲ್ಲ ವಸತಿಹೀನರಾದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅಂಥ ಬಡ ವಸತಿಹೀನರಿಗೆ ಮನೆ ಕಟ್ಟಿಸಿಕೊಡಲು ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆಯೇ;